ವಿಷಯ:- ತಾಜ್ ಗುಂಪಿನವರಿಂದ ನಾಗರಹೊಳೆಯಲ್ಲಿ ಅರಣ್ಯ ವಿಹಾರಧಾಮ ನಿರ್ಮಾಣ.

6(162)

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ):- ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ತಾಜ್ ಗುಂಪಿನವರಿಗೆ ನಾಗರಹೊಳೆಯಲ್ಲಿ ಅರಣ್ಯ ವಿಹಾರಧಾಮಗಳನ್ನು ಕಟ್ಟಲು ಅನುಮತಿ ನೀಡಲಾಗಿದೆಯೇ;

ಆ) ಇದರಿಂದ ಇಲ್ಲಿನ ಪರಿಸರಕ್ಕೆ ಹಾನಿಯಾಗುವುದಿಲ್ಲವೇ;

ಇ) ತಾಜ್ ಗುಂಪಿನವರು ಅರಣ್ಯ ಸಂರಕ್ಷಣಾ ಕಾನೂನನ್ನು ಈಗಾಗಲೆ ಉಲ್ಲಂಘಿಸಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿರುವುದು ನಿಜವೇ;

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು):-

ಅ) ಇಲ್ಲ.

ಆ) ಇಲ್ಲ.

ಇ) ತಾಜ್ ಗುಂಪಿನವರು ಅರಣ್ಯ ಸಂರಕ್ಷಣಾ ಕಾನೂನನ್ನು ಉಲ್ಲಂಘನೆ ಮಾಡಿರುವುದಿಲ್ಲ.

ಈ) ಸರ್ಕಾರದವರು ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ:- ವಿವಿಧ ಶ್ರೇಣಿಯ ಸರ್ಕಾರಿ ಆಸ್ಪತ್ರೆಗಳ ಬಗ್ಗೆ.

7(41)

ಶ್ರೀ ಡಿ.ಆರ್. ಪಾಟೀಲ್ (ಗದಗ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯದಲ್ಲಿರುವ ವಿವಿಧ ಶ್ರೇಣಿಯ ಸರ್ಕಾರಿ ಆಸ್ಪತ್ರೆಗಳೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು).

ಆ) ಈ ಆಸ್ಪತ್ರೆಗಳು ಆಯಾ ಜಿಲ್ಲೆಯ ಜನಸಂಖ್ಯೆಗನುಗುಣವಾಗಿ ಇದೆಯೇ;

ಇ) ಈ ಬಗ್ಗೆ ತಾರತಮ್ಯವಿದ್ದರೆ ಅದನ್ನು ಸರಿಪಡಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಡಾ॥ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ರಾಜ್ಯದಲ್ಲಿ ಒಟ್ಟು 2281 ವಿವಿಧ ಶ್ರೇಣಿಯ ಆಸ್ಪತ್ರೆಗಳಿದ್ದು ಅವುಗಳ ವಿವರ ಕೆಳಕಂಡಂತಿರುತ್ತದೆ.

1. 176 ಸಾರ್ವಜನಿಕ ಆಸ್ಪತ್ರೆಗಳು
2. 1509 ಪ್ರಾಥಮಿಕ ಆರೋಗ್ಯ ಕೇಂದ್ರಗಳು
3. 596 ಪ್ರಾಥಮಿಕ ಆರೋಗ್ಯ ಘಟಕಗಳು

ಜಿಲ್ಲಾವಾರು ವಿವರದ ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಆ) ಇದೆ.

ಇ) ಉದ್ಭವಿಸುವುದಿಲ್ಲ.

ಅನುಬಂಧ-1

ರಾಜ್ಯದಲ್ಲಿ ಜಿಲ್ಲಾವಾರು, ಸಾರ್ವಜನಿಕ ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಪ್ರಾಥಮಿಕ ಆರೋಗ್ಯ ಘಟಕಗಳು ಈ ಕೆಳಗಿನಂತಿರುತ್ತದೆ.

ಕ್ರಮ ಸಂಖ್ಯೆ	ಜಿಲ್ಲೆ	ಸಾರ್ವಜನಿಕ ಆಸ್ಪತ್ರೆಗಳು	ಪ್ರಾಥಮಿಕ ಆರೋಗ್ಯ ಕೇಂದ್ರಗಳು	ಪ್ರಾಥಮಿಕ ಆರೋಗ್ಯ ಘಟಕಗಳು
1	2	3	4	5
1.	ಬೆಂಗಳೂರು (ನಗರ)	12	29	42
2.	ಬೆಂಗಳೂರು (ಗ್ರಾಮಾಂತರ)	1	68	29
3.	ಚಿತ್ರದುರ್ಗ	7	81	49
4.	ಕೋಲಾರ	10	74	37
5.	ಶಿವಮೊಗ್ಗ	7	68	50
6.	ತುಮಕೂರು	4	89	40
7.	ಬೆಳಗಾಂ	9	122	13
8.	ಬಿಜಾಪುರ	12	96	4
9.	ಧಾರವಾಡ	17	95	34
10.	ಉತ್ತರ ಕನ್ನಡ	11	57	20
11.	ಬಳ್ಳಾರಿ	12	60	23
12.	ಬೀದರ್	5	40	14

1	2	3	4	5
13.	ಗುಲ್ಬರ್ಗಾ	12	94	24
14.	ರಾಯಚೂರು	9	76	8
15.	ಚಿಕ್ಕಮಗಳೂರು	5	45	42
16.	ದಕ್ಷಿಣ ಕನ್ನಡ	10	120	16
17.	ಹಾಸನ	7	72	53
18.	ಕೊಡಗು	8	29	4
19.	ಮಂಡ್ಯ	6	61	38
20.	ಮೈಸೂರು	9	133	56
	ಒಟ್ಟು	176	1509	596

ವಿಷಯ:- ಸಾಮಾಜಿಕ ಅರಣ್ಯ ಯೋಜನೆ

9(42)

ಶ್ರೀ ಡಿ.ಆರ್. ಪಾಟೀಲ್ (ಗದಗ):- ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಕಳೆದ ಮೂರು ವರ್ಷಗಳಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿಯಲ್ಲಿ ವೆಚ್ಚ ಮಾಡಿದ ಹಣವೆಷ್ಟು? (ಜಿಲ್ಲಾವಾರು ತಾಲ್ಲೂಕುವಾರು ವಿವರ ನೀಡುವುದು;

ಆ) ಈ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷದಲ್ಲಿ ನೆಟ್ಟ ಗಿಡಗಳೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು).

ಇ) ಇವುಗಳಲ್ಲಿ ಈಗ ಜೀವಂತವಿದ್ದು, ಬೆಳೆಯುತ್ತಿರುವ ಗಿಡಗಳೆಷ್ಟು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು):-

ಅ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿಯಲ್ಲಿ 1993-94, 1994-95 ಮತ್ತು 1995-96ನೇ ಸಾಲಿನಲ್ಲಿ ವೆಚ್ಚ ಮಾಡಲಾಗಿರುವ ಹಣದ ವಿವರಗಳು ಈ ಕೆಳಕಂಡಂತಿವೆ:

1. 1993-94 - 1364.672 ಲಕ್ಷ ರೂಗಳು
2. 1994-95 - 1223.506 ಲಕ್ಷ ರೂಗಳು
3. 1995-96 - 1089.003 ಲಕ್ಷ ರೂಗಳು